# ಸುದ್ದಿ ಸಂಚಯ

## ರಾಮಕೃಷ್ಣ ಮಿಷನ್ನಿನ ೨೦೦೧-೨೦೦೨ನೇ ಸಾಲಿನ ಆಡಳಿತ ಸಂಸ್ಥೆಯ ವರದಿ

ರಾಮಕೃಷ್ಣ ಮಿಷನ್ನಿನ ೯೩ನೇ ವಾರ್ಷಿಕ ಸಭೆಯು ೨೦೦೨ರ ೧೫ನೇ ಡಿಸೆಂಬರ್ ಭಾನುವಾರ ಮಧ್ಯಾಹ್ನ ೩.೩೦ ಗಂಟೆಗೆ ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ನಡೆಯಿತು.

ಈ ಸಾಲಿನಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳಲ್ಲಿ, ಮಲೇಶಿಯಾದ ಪೆಟಲಿಂಗ್ ಜಯಾದಲ್ಲಿ ರಾಮಕೃಷ್ಣ ಸಂಘದ ಹೊಸ ಕೇಂದ್ರವನ್ನು ತೆರೆದದ್ದು ಮತ್ತು ಅಂಗವಿಕಲರ ಸೇವೆಗಾಗಿ ಕೊಯಮತ್ತೂರಿನಲ್ಲಿ ಅಂತರಾಷ್ಟ್ರೀಯ ಮಾನವ ಸಂಪನ್ಮೂಲದ ಅಭಿವೃದ್ಧಿ ಕೇಂದ್ರದ ಉದ್ಘಾಟನೆ ಬಹು ಪ್ರಮುಖವಾದುವುಗಳಾಗಿವೆ. ಇತ್ತೀಚೆಗೆ ೨೦೦೨ರಲ್ಲಿ ಯುನೆಸ್ಕೋನಿಂದ ಸಹಾನುಭೂತಿ ಮತ್ತು ಅಹಿಂಸಾ ತತ್ತ್ವಗಳ ಸಂವರ್ಧನೆಯಲ್ಲಿ ತೊಡಗಿಸಿಕೊಂಡಿರುವ ರಾಮಕೃಷ್ಣ ಮಿಷನ್ ಪ್ರಶಂಸಾತ್ಮಕ ಮೆಚ್ಚುಗೆಯನ್ನು ಪಡೆದಿದೆ.ಕೊಲ್ಕತ್ತಾದ ಬಾರಾನಗರದಲ್ಲಿ ರಾಮಕೃಷ್ಣ ಮಹಾಸಂಘದ ಮೊಟ್ಟಮೊದಲ ಆಶ್ರಮವು ೧೮೮೬ ರಲ್ಲಿ ತಲೆಎತ್ತಿದ ಸ್ಥಳದಲ್ಲೇ ರಾಮಕೃಷ್ಣ ಮಠದ ಉಸ್ತುವಾರಿಯಲ್ಲಿ ಹೊಸಕೇಂದ್ರವೊಂದನ್ನು ತೆರೆಯಲಾಗಿದೆ. ಬಾಂಗ್ಲಾ ದೇಶದಲ್ಲಿನ ಹಬೀಗಂಜ್‌ನಲ್ಲಿ ಶ್ರೀರಾಮಕೃಷ್ಣರ ಹೊಸ ಮಂದಿರವನ್ನು ಸಮರ್ಪಿಸಲಾಯಿತು. ಈ ಸಾಲಿನಲ್ಲಿ ದೇಶದ ಹಲವಾರು ಭಾಗಗಳಲ್ಲಿ ೧೧.೬೦ ಕೋಟಿ ರೂಗಳ ವೆಚ್ಚದಲ್ಲಿ ವ್ಯಾಪಕವಾದ ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಮಿಷನ್ ಕೈಗೊಂಡಿತ್ತು. ಆಸುಪಾಸಿನ ೮೦೦ ಗ್ರಾಮಗಳಲ್ಲಿನ ಸುಮಾರು ೫.೭೫ ಲಕ್ಷ ಜನರಿಗೆ ಈ ಕಾರ್ಯಕ್ರಮಗಳ ಪ್ರಯೋಜನ ತಲುಪಿತು. ೨ ವರ್ಷಗಳ ಹಿಂದೆ ಒರಿಸ್ಸಾದಲ್ಲಿ ಕೈಗೊಂಡಿದ್ದ ಬೃಹತ್ ಪ್ರಮಾಣದ ಪುನರ್ವಸತಿ ಕಾರ್ಯಕ್ರಮವು ತನ್ನ ಕೊನೆಯ ಹಂತದಲ್ಲಿದ್ದು ಉಳಿದ ೨೪ ಮನೆಗಳ ಹಾಗೂ ಶಾಲೆಯೊಡನೆ ಆಶ್ರಯ ಗೃಹಗಳು ಸೇರಿದ್ದ ೨ ಕಟ್ಟಡಗಳ ನಿರ್ಮಾಣದೊಂದಿಗೆ ಮುಕ್ತಾಯವಾಯಿತು. ಹೋದ ವರ್ಷ ಗುಜರಾತ್‌ನಲ್ಲಿ ಕೈಗೊಂಡಿದ್ದ ಇನ್ನೂ ಹೆಚ್ಚಿನ ಬೃಹತ್ ಪ್ರಮಾಣದ ಪುನರ್ವಸತಿ ಕಾರ್ಯಕ್ರಮವು ಮುಂದುವರೆಯುತ್ತಿದ್ದು ಈಗಾಗಲೇ ೨೮೨ ಮನೆಗಳ ಹಾಗೂ ೪೭ ಪ್ರಾಥಮಿಕ ಶಾಲೆಗಳ ನಿರ್ಮಾಣ ಮುಗಿದಿದೆ.

ಸುಮಾರು ೧.೯೨ ಕೋಟಿ ರೂಗಳನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ-ವೇತನ (scholarship); ವೃದ್ಧರು, ರೋಗಿಗಳು ಮತ್ತು ಅನಾಥರಿಗೆ ಧನಸಹಾಯ ಮುಂತಾದವುಗಳಿಗೆ ಖರ್ಚು ಮಾಡಲಾಯಿತು. ೯ ಆಸ್ಪತ್ರೆಗಳು, ೧೦೮ ಔಷಧಾಲಯಗಳು ಮತ್ತು ಸಂಚಾರಿ ಔಷಧ ವಿತರಣೆ ಕೇಂದ್ರಗಳ ಮೂಲಕ ೬೦ ಲಕ್ಷಕ್ಕೂ ಹೆಚ್ಚು ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಯಿತು. ಇದಕ್ಕೆ ತಗಲಿದ ಒಟ್ಟು ಖರ್ಚು ರೂ ೩೦.೨೮ ಕೋಟಿ. ೧.೩೭ ಲಕ್ಷ ವಿದ್ಯಾರ್ಥಿಗಳು ನಮ್ಮ ಶಿಕ್ಷಣ ಸಂಸ್ಥೆಗಳ ಪ್ರಯೋಜನವನ್ನು ಪಡೆದಿರುವರು. ಇವರಲ್ಲಿ ೪೦ ಸಾವಿರಕ್ಕೂ ಹೆಚ್ಚಿನವರು ವಿದ್ಯಾರ್ಥಿನಿಯರು. ರೂ.೭೯.೫೪ ಕೋಟಿಯನ್ನು ಶಿಕ್ಷಣಕಾರ್ಯದಲ್ಲಿ ವಿನಿಯೋಗಿಸಲಾಯಿತು. ಗ್ರಾಮೀಣ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಒಟ್ಟು ಹಣ ರೂ.೮.೨೮ ಕೋಟಿಗಳು.

ಈ ಎಲ್ಲ ಯೋಜನೆಗಳಲ್ಲಿ ನಮಗೆ ಅನೇಕ ರೀತಿಯ ಸಹಾಯ ಮಾಡಿದ ನಮ್ಮ ಸದಸ್ಯರು ಮತ್ತು ಸ್ನೇಹಿತರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ಅವರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಸ್ವಾಮಿ ಸ್ಮರಣಾನಂದ
(ಪ್ರಧಾನ ಕಾರ್ಯದರ್ಶಿಗಳು)

## ಮಂಗಳೂರಿನಲ್ಲಿ ಶ್ರೀರಾಮಕೃಷ್ಣ ಮಠದ ವಾರ್ಷಿಕೋತ್ಸವ

ಮಂಗಳೂರಿನ ಶ್ರೀರಾಮಕೃಷ್ಣ ಮಠದ ವಾರ್ಷಿಕೋತ್ಸವವು ಇದೇ ಡಿಸೆಂಬರ್ ೧೪ರಿಂದ ೧೮ರವರೆಗೆ ನಡೆಯಿತು. ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಅಲಸೂರು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿ ಅವರು ಭಗವಾನ್ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಜೀವನ ಹಾಗೂ ಸಂದೇಶಗಳ ಕುರಿತು ಪ್ರವಚನ ನೀಡಿದರು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಅವರು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಸಂದೇಶಗಳ ಕುರಿತು ಪ್ರವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ದಿವ್ಯತ್ರಯರ ಜೀವನ ಹಾಗೂ ಸಂದೇಶಗಳ ಮಹತ್ವವನ್ನು ತಿಳಿಸಿದರು. ಸ್ವಾಮಿ ಆತ್ಮವಿದಾನಂದಜಿ ಹಾಗೂ ಬೆಂಗಳೂರಿನ ವಿದ್ವಾನ್ ಕೆ. ಗುರುರಾಜ್ ಅವರು ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡಿದರು. ಭಗವಾನ್ ಶ್ರೀರಾಮಕೃಷ್ಣರನ್ನು ಕುರಿತ ಚಲನಚಿತ್ರವನ್ನು ತೋರಿಸಲಾಯಿತು ಹಾಗೂ ಬಾಲಕಾಶ್ರಮ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಭಕ್ತರು ಹಾಗೂ ಅಭಿಮಾನಿಗಳು ಬಹು ಸಂಖ್ಯೆಯಲ್ಲಿ ಹಾಜರಿದ್ದು ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದರು. ✡

## ವಿವೇಕಪ್ರಭ ಆಧ್ಯಾತ್ಮಿಕ ಶಿಬಿರ

ಈ ವರ್ಷ ಸ್ವಾಮಿ ವಿವೇಕಾನಂದರ ಮಹಾಸಮಾಧಿಯ ಶತಮಾನೋತ್ಸವ ವರ್ಷವಾಗಿದೆ ಮತ್ತು ವಿವೇಕಪ್ರಭ ಪತ್ರಿಕೆ ತನ್ನ ೩ ವರ್ಷಗಳ ಸೇವೆಯನ್ನು ಯಶಸ್ವಿಯಾಗಿ ಪೂರೈಸಿದೆ. ಇದರ ಅಂಗವಾಗಿ ವಿವೇಕಪ್ರಭಕ್ಕೆ ಅತಿ ಹೆಚ್ಚು ಚಂದಾ ಮಾಡಿಕೊಟ್ಟಿರುವ ನಮ್ಮೆಲ್ಲ ಸ್ನೇಹಿತರಿಗಾಗಿ ೩ ದಿನಗಳ ಉಚಿತ ಆಧ್ಯಾತ್ಮಿಕ ಶಿಬಿರವನ್ನು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ (RIMSE) ಯಲ್ಲಿ ಡಿಸೆಂಬರ್ ೨೦ ರಿಂದ ೨೨ರವರೆಗೆ ಆಯೋಜಿತವಾಗಿತ್ತು. ಶಿಬಿರದಲ್ಲಿ ೭೩ ವಿವೇಕಪ್ರಭದ ಚಂದಾ ಸಂಗ್ರಾಹಕರು ಮತ್ತು ಸ್ವಯಂಸೇವಕರು ಭಾಗವಹಿಸಿದ್ದರು. ಶಿಬಿರದಲ್ಲಿ ಪ್ರವಚನಗಳು, ಚಿತ್ರಪ್ರದರ್ಶನ ಮತ್ತು ಸಮೂಹಿಕ ಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಚರ್ಚೆಗಳಿಂದ ಪರಸ್ಪರ ವಿಚಾರವಿನಿಮಯಕ್ಕೆ ಬಹಳ ಅನುಕೂಲವಾಯಿತು. ಶಿಬಿರಾರ್ಥಿಗಳಿಗೆ ತಾವು ಮಾಡುತ್ತಿರುವ ಸೇವಾಕಾರ್ಯದಲ್ಲಿ, ಒಂದು ಹೊಸದೃಷ್ಟಿ ಮತ್ತು ಪ್ರೇರಣೆಯನ್ನು ಮೂಡಿಸಲು ಯಶಸ್ವಿಯಾಯಿತು. ✡